KACM010021832019

Presented on : 27-09-2019
Registered on : 27-09-2019
Decided on : --
Duration :

**IN THE COURT OF**
**ADDL DISTRICT AND SESSIONS JUDGE CHIKMAGALUR**
**AT Chikmagalur,CHIKMAGALUR**
**(Presided Over by B PUSHPANJALI)**

**SPL.C/117/2019**

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಚಿಕ್ಕಮಗಳೂರು**

**ಸ್ಪೆಷಲ್ ಮೊಕದ್ದಮೆ ಸಂಖ್ಯೆಃ 117/2019**

| | | | | |
|---|---|---|---|---|
| **ಸಾಕ್ಷಿದಾರರ ಹೆಸರು** | ಃ | ಡಾ. ಹೇಮಂತ ನಂದಕುಮಾರ ಭಟ್ | ಪಿ.ಡಬ್ಲ್ಯೂ. | 12 |
| **ತಂದೆಯ ಹೆಸರು** | ಃ | ನಂದಕುಮಾರ ಭಟ್ | ಸಿ.ಡಬ್ಲ್ಯೂ. | 15 |
| **ವಯಸ್ಸು** | ಃ | 51 ವರ್ಷ | | |
| **ಉದ್ಯೋಗ** | ಃ | ಅರವಳಿಕೆ ತಜ್ಞರು, ಎಂ.ಜಿ.ಎಂ ಆಸ್ಪತ್ರೆ, ಮೂಡಿಗೆರೆ | | |
| **ವಾಸಸ್ಥಳ** | ಃ | ಮೂಡಿಗೆರೆ | | |

**ದಿಃ 26-05-2023 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

1. **ನಾನು ದಿಃ 05.06.2014 ರಿಂದ ಇಲ್ಲಿಯತನಕ ಮೂಡಿಗೆರೆಯ ಎಂ.ಜಿ.ಎಂ.**

ಸರ್ಕಾರಿ ಆಸ್ಪತ್ರೆಯಲ್ಲಿ ಅರವಳಿಕೆ ತಜ್ಞನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ *24.05.2019* ರಂದು ರಾತ್ರಿ *8.20* ಗಂಟೆಗೆ ಸಂತೋಷ ಎನ್ನುವವರು ಅದೇ ದಿನ ರಾತ್ರಿ *7.45* ಕ್ಕೆ ಹಲ್ಲೆಗೆ ಒಳಗಾದ ಹಿನ್ನಲೆಯಲ್ಲಿ ನಮ್ಮ ಆಸ್ಪತ್ರೆಗೆ ಬಂದಿರುತ್ತಾರೆ. ನಾನು ಸದರಿಯವರನ್ನು ಪರೀಕ್ಷಿಸಿ ನೋಡಿದಾಗ ಕೆಳಕಂಡ ಗಾಯಗಳು ಕಂಡುಬಂದವು.

   1. ಬೆನ್ನಿನ ಬಲಭಾಗದಲ್ಲಿ ಬಾವು ಮತ್ತು ನೋವು ಇದೆ.
   2. ಎಡತೊಡೆಯ ಮೇಲೆ *4* ಸೆಂ.ಮೀ ಇಂಟು *1/2* ಸೆಂ.ಮೀ ಅಳತೆಯ ಊತ ಹಾಗೂ ತರಚಿದ ಗಾಯ.
   3. ಬಲಮುಂಗೈ ಮೇಲೆ *3* ಸೆಂ.ಮೀ ಇಂಟು *1/2* ಸೆಂ.ಮೀ ಅಳತೆಯ ಊತ ಹಾಗೂ ತರಚಿದ ಗಾಯ.
   4. ಬಲಪಾದದ ಮೇಲೆ *1* ಸೆಂ.ಮೀ ಇಂಟು *1* ಸೆಂ.ಮೀ ಅಳತೆಯ ಊತ ಹಾಗೂ ತರಚಿದ ಗಾಯ.

3. ನನ್ನ ಅಭಿಪ್ರಾಯದಲ್ಲಿ ಸದರಿ ಗಾಯವು ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ. ಇದನ್ನು ನಮೂದಿಸಿ ನಿಶಾನೆ ಪಿ.*8* ರಂತೆ ಗಾಯದ ಪ್ರಮಾಣಪತ್ರವನ್ನು ನೀಡಿದ್ದು ಅದರಲ್ಲಿ ಕಂಡು ಬರುವ ನಿಶಾನೆ ಪಿ.*8*(ಎ) ನನ್ನ ಸಹಿಯಾಗಿರುತ್ತದೆ. ನ್ಯಾಯಾಲಯದ ಮುಂದಿರುವ ಮುಮಾ.*1* ರಿಂದ ಹೊಡೆದಾಗ ನಿಪಿ.*8* ರಲ್ಲಿ ಕಾಣಿಸಿದ ಗಾಯಗಳು ಆಗುವ ಸಾಧ್ಯತೆ ಇದೆ.

<u>ಪಾಟೀ ಸವಾಲುಃ ಆರೋಪಿಗಳ ಪರವಾಗಿ ಶ್ರೀ.ಹೆಚ್.ಎಂ.ಎಸ್. ವಕೀಲರಿಂದಃ</u>

4. ಗಾಯಾಳು ನಮ್ಮ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿಲ್ಲ.

ಗಾಯಾಳು ನಮ್ಮ ಆಸ್ಪತ್ರೆಯಲ್ಲಿ ಎಷ್ಟು ಸಮಯದ ತನಕ ಇದ್ದರು ಎಂದು ನೆನಪಿಲ್ಲ. ಇಂತಹವರಿಂದಲೇ ಹಲ್ಲೆಯಾಗಿದೆ ಎಂದು ಅವರ ಹೆಸರು ಮತ್ತು ಯಾವ ಆಯುಧ ಎಂದು ಗಾಯಾಳು ತಿಳಿಸಿಲ್ಲ. ಚಿಕಿತ್ಸೆ ಪಡೆಯುವ ಕಾಲಕ್ಕೆ ಪೋಲೀಸರು ಬಂದು ಗಾಯಾಳುವಿನ ಹೇಳಿಕೆ ಪಡೆದ ಬಗ್ಗೆ ನೆನಪಿಲ್ಲ. ಗಾರೆ ಕೆಲಸ ಮಾಡುವಾಗ ಮೇಲಿಂದ ಒರಟಾದ ವಸ್ತುವಿನ ಮೇಲೆ ಉರುಳಿ ಬಿದ್ದಾಗ ನಿಪಿ.8 ರಲ್ಲಿ ಕಾಣಿಸಿದ ಗಾಯಗಳು ಆಗುವ ಸಾಧ್ಯತೆ ಇದೆ ಎಂದರೆ ಸರಿ. ತನಿಖಾಧಿಕಾರಿ ಮು.ಮಾ.1 ನ್ನು ಹಾಜರುಪಡಿಸಿ ಗಾಯದ ಬಗ್ಗೆ ಅಂತಿಮ ಅಭಿಪ್ರಾಯವನ್ನು ಪಡೆದುಕೊಂಡಿಲ್ಲ. ಗಾಯಾಳುವಿಗೆ ಯಾವುದೇ ಗಾಯವಾಗದಿದ್ದರೂ ಸಹ ತನಿಖಾಧಿಕಾರಿಗೆ ಸಹಾಯ ಮಾಡಲು ಸುಳ್ಳು ಗಾಯದ ಪ್ರಮಾಣ ಪತ್ರ ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

ಸಹಿ/-
(ಬಿ.ಪುಷ್ಪಾಂಜಲಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಅ.

Visit **ecourts.gov.in** for updates or download mobile app “**eCourts Services**” from Android or iOS